ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 06-08-2018ರಂದು ನಡೆದ ಸಭೆಯ ನಡವಳಿಗಳು

ವಿಷಯದ ಸಂಖ್ಯೆ: ತೆಲಸ್ಥಾಸ/ 14 /2018-19

ಆಯುಕ್ತರ ದಿನಾಂಕ: 26-07-2018ರ ಟಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ಸರ್ಕಾರವು ಬೆಂಗಳೂರು ನಗರದ ನಾಗರೀಕರಿಗೆ ಕೈಗೆಟುಕುವ ದರದಲ್ಲಿ ಊಟ ಮತ್ತು ಉಪಹಾರ ನೀಡುವ ಯೋಜನೆಯನ್ನು ಕೈಗೆತ್ತಿಕೊಂಡಿದ್ದು, ಸದರಿ ಯೋಜನೆಯ ಅನುಷ್ಠಾನವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜವಾಬ್ದಾರಿಗೆ ನೀಡಿರುತ್ತದೆ.

ಈ ನಿಟ್ಟಿನಲ್ಲಿ ಬೆಂಗಳೂರು ನಗರದಲ್ಲಿ ಲಭ್ಯವಿರುವ ಸರ್ಕಾರಿ ಜಾಗದಲ್ಲಿ ಪ್ರತಿ ವಾರ್ಡ್‌ಗೆ ಒಂದರಂತೆ 198 ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಿಸಲು ಹಾಗೂ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಇಂದಿರಾ ಕ್ಯಾಂಟೀನ್ ಅಡಿಗೆ ಘಟಕ ಕಟ್ಟಡವನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಈಗಾಗಲೇ 174 ಇಂದಿರಾ ಕ್ಯಾಂಟೀನ್‌ಗಳು ಹಾಗೂ 21 ಅಡುಗೆ ಕೇಂದ್ರ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ದಿನಾಂಕ:16.08.2017 ರಿಂದ ಕಾರ್ಯಾರಂಭ ಮಾಡಲಾಗಿರುತ್ತದೆ.

ಇಂದಿರಾ ಕ್ಯಾಂಟೀನ್ ಯೋಜನೆಯನ್ನು ದಿನಾಂಕ:07.06.2017 ರ ಸಚಿವ ಸಂಪುಟದ ತೀರ್ಮಾನದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತು ಮತ್ತು ಕರ್ನಾಟಕ ಸರ್ಕಾರದ ಇತರೆ ಇಲಾಖೆಗಳ ಸ್ವತ್ತುಗಳಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಿಸುವುದೆಂದು ಮತ್ತು ಸದರಿ ಸ್ವತ್ತುನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿರ್ವಹಣೆ ಮಾಡಬೇಕೆಂದು ಸೂಚಿಸಿರುತ್ತದೆ.

ಸದರಿ ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಾಣವನ್ನು Pre-Cast ತಂತ್ರಜ್ಞಾನದಿಂದ ನಿರ್ಮಿಸಲಾಗಿದ್ದು, ಮೆ||ಕೆ.ಇ.ಎಫ್ ಸಂಸ್ಥೆಯವರು Pre-Cast ಕಟ್ಟಡವನ್ನು ನಿರ್ಮಿಸಿಕೊಟ್ಟಿರುತ್ತಾರೆ. ಸದರಿ ಅಂದಾಜು ಪಟ್ಟಿಯಲ್ಲಿ ಕಟ್ಟಡ ನಿರ್ಮಾಣ ಮಾತ್ರ ಸೀಮಿತಗೊಂಡಿರುತ್ತದೆ.

ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಿಸಿದ ನಂತರ ಬೆಂಗಳೂರು ನಗರದ ಮಾನ್ಯ ಪೋಲೀಸ್ ಆಯುಕ್ತರು, ದಿನಾಂಕ:05.09.2017 ರಂದು ಪತ್ರವನ್ನು ಬರೆದು ಎಲ್ಲಾ ಇಂದಿರಾ ಕ್ಯಾಂಟೀನ್ ಮತ್ತು ಅಡುಗೆ ಕೋಣೆಗಳಿಗೆ ಪೆಟ್ರೋಲ್ ಭದ್ರತೆಯನ್ನು ಒದಗಿಸಲು ಹಾಗೂ ಎಲ್ಲಾ ಇಂದಿರಾ ಕ್ಯಾಂಟೀನ್ ಕಟ್ಟಡಗಳಿಗೆ ಕಾಂಪೌಂಡ್/ಗ್ರಿಲ್‌ಗಳನ್ನು ತಪ್ಪದೆ ಒದಗಿಸಬೇಕೆಂದು ಭದ್ರತಾ ದೃಷ್ಟಿಯಿಂದ (Security Reasons) ಸಲಹೆಯನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಸದರಿ ಭದ್ರತಾ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳಬೇಕಾಗಿದ ಹಿನ್ನಲೆಯಲ್ಲಿ ಎಲ್ಲಾ ವಲಯದ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರುಗಳಿಗೆ ಸೂಚನೆಯನ್ನು ನೀಡಿ ತಮ್ಮ ತಮ್ಮ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಸ್ಥಳಕ್ಕೆ ಅನುಗುಣವಾಗಿ ಇಂದಿರಾ ಕ್ಯಾಂಟೀನ್ ಕಟ್ಟಡದ ಭದ್ರತೆ ಮತ್ತು ಇತರ ಸೌಲಭ್ಯಗಳನ್ನು ಕೂಡಲೇ ಒದಗಿಸಬೇಕೆಂದು ಮತ್ತು ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವ ಹಿನ್ನಲೆಯಲ್ಲಿ ಸದರಿ ಕಾಮಗಾರಿಯನ್ನು ಸರ್ಕಾರದಿಂದ ಕೆ.ಟಿ.ಪಿ.ಪಿ ಕಾಯ್ದೆ ಸೆಕ್ಷನ್ 4(ಜಿ) ಅನ್ವಯ ವಿನಾಯಿತಿ ಪಡೆದಿರುವ ಸರ್ಕಾರಿ ಸಂಸ್ಥೆಯಾದ ಮೆ||ಕೆ.ಆರ್.ಐ.ಡಿ.ಎಲ್ ಪತಿಯಿಂದ ಎಲ್ಲಾ ಸೌಲಭ್ಯ (Augmentation/Ambience Work) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸೂಚಿಸಲಾಗಿರುತ್ತದೆ.

ಸದರಿ ಸೂಚನೆಯಂತೆ ವಲಯದ ಎಲ್ಲಾ ಮುಖ್ಯ ಅಭಿಯಂತರರುಗಳು ತಮ್ಮ ತಮ್ಮ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಕಾಮಗಾರಿ ನಿರ್ವಹಿಸಲು ಅಂದಾಜು ಪಟ್ಟಿಗಳನ್ನು ಸಲ್ಲಿಸಿದ್ದು,ಸದರಿ ಇಂದಿರಾ ಕ್ಯಾಂಟೀನ್ ಕಟ್ಟಡದ ಸೌಲಭ್ಯ (Augmentation/Ambience Works) ಕಾಮಗಾರಿಗಳನ್ನು ಮೂರು ಹಂತದಲ್ಲಿ ಕೈಗೊಂಡಿದ್ದು, ಸದರಿ ವೆಚ್ಚವು ಒಟ್ಟು ರೂ.38.00 ಕೋಟಗಳಾಗಿದ್ದು, ಸದರಿ ಮೊತ್ತವನ್ನು ಕರ್ನಾಟಕ ಸರ್ಕಾರದಿಂದ ನಗರೋತ್ಥಾನ ಯೋಜನೆಯಡಿಯಲ್ಲಿ ನೀಡಲಾದ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳಿಗೆ ಟೆಂಡರ್ ಕರೆದ ಸಂದರ್ಭದಲ್ಲಿ ಬಂದ "ಕಡಿಮೆ ಟೆಂಡರ್ ಪ್ರೀಮಿಯಂ" ನಿಂದ ಉಳಿತಾಯವಾದ ಮೊತ್ತದಲ್ಲಿ ಭರಿಸಿಕೊಳ್ಳಲು ಸರ್ಕಾರಕ್ಕೆ ದಿನಾಂಕ:10.01.2018 ಮತ್ತು 16.03.2018 ರಂದು ಪ್ರಸ್ತಾವನೆಯನ್ನು ಸಲ್ಲಿಸಲಾಯಿತು. ವಲಯದ ಮುಖ್ಯ ಅಭಿಯಂತರರುಗಳು ಸಲ್ಲಿಸಿರುವ ಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ-I ರಲ್ಲಿ ಈ ಪತ್ರದೊಂದಿಗೆ ಲಗತ್ತಿಸಿದೆ.

ಆದರೆ, ಸದರಿ ಪ್ರಸ್ತಾವನೆಯನ್ನು ಪುನ ಸರ್ಕಾರವು ಪರಿಶೀಲಿಸಿ, ಕರ್ನಾಟಕ ರಾಜ್ಯ ಸರ್ಕಾರದ ಸಚಿವ ಸಂಪುಟವು ಇಂದಿರಾ ಕ್ಯಾಂಟೀನ್ ಕಟ್ಟಡ ನಿರ್ಮಿಸಲು ಮಾತ್ರ ಅನುದಾನ ಒದಗಿಸಿದ್ದು, ಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಸೌಲಭ್ಯ ಕಾಮಗಾರಿಗಳಿಗೆ ಅನುದಾನ ಒದಗಿಸುವ ಪ್ರಸ್ತಾವನೆಯು ಎಲ್ಲೇ ಮೀರಿದ್ದಾಗಿರುತ್ತದೆ ಎಂದು ಟಪ್ಪಣಿಯನ್ನು "The Proposal of BBMP is rejected as this is beyond the scope of the programmee approved by the Cabinet. Any additional work taken up may be paid by BBMP from its own funds." ಎಂದು ಅಭಿಪ್ರಾಯಿಸಿರುತ್ತಾರೆ.

ಸದರಿ ವಿಷಯವಾಗಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗಿ ಇಂದಿರಾ ಕ್ಯಾಂಟೀನ್ ನಿರ್ಮಾಣದಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಲವಾರು ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇದರಿಂದ ಬಿಬಿಎಂಪಿಯ ಆಸ್ತಿ ಮೌಲ್ಯವು ಹೆಚ್ಚಾಗಿರುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ.

ಸದರಿ ಇಂದಿರಾ ಕ್ಯಾಂಟೀನ್ ಕಟ್ಟಡಗಳ ಭದ್ರತೆ ಮತ್ತು ಸೌಲಭ್ಯ ಒದಗಿಸುವ ಕಾಮಗಾರಿಯನ್ನು ಕೈಗೊಳ್ಳಲಾದ ಪ್ರಯುಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಿತಿನ ಮೌಲ್ಯವು (Asset Value) ಸುಮಾರು ರೂ.690.00 ಕೋಟಿ ಮೊತ್ತಕ್ಕೂ ಹೆಚ್ಚಿಗೆಯಾಗಿರುತ್ತದೆ. ಆದ್ದರಿಂದ, ಘನ ಸರ್ಕಾರದ ಆದೇಶದಂತೆ ಇಂದಿರಾ ಕ್ಯಾಂಟೀನ್ ಸುತ್ತಮುತ್ತಲು ಭದ್ರತೆ ಮತ್ತು ಇತರೆ ಸೌಲಭ್ಯ (Augmentation/Ambience Work) ಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವಂತ ಅನುದಾನದಲ್ಲಿ ಭರಿಸಿಕೊಳ್ಳಬಹುದಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ರ ಆಯವ್ಯಯವು ಸರ್ಕಾರದ ವತಿಯಿಂದ ಅನುಮೋದನೆಗೊಂಡಿದ್ದು, ಇಂದಿರಾ ಕ್ಯಾಂಟೀನ್ ಸುತ್ತಮುತ್ತಲು ಭದ್ರತೆ ಮತ್ತು ಇತರೆ ಸೌಲಭ್ಯ (Augmentation/Ambience Work) ಗಳನ್ನು ಒದಗಿಸುವ ಕಾಮಗಾರಿಗಳಿಗೆ ಅನುದಾನ ಲಭ್ಯವಿಲ್ಲವಾಗಿರುವುದರಿಂದ 2018-19ನೇ ಸಾಲಿನ ಆಯವ್ಯಯದಲ್ಲಿ ಉಳಿಕೆಯಾಗಬಹುದಾದ ಅನುದಾನವನ್ನು "ಆಯವ್ಯಯದ ಅನುದಾನ ಮರುಹೊಂದಾಣಿಕೆ (Re-appropriation of grants)" ಅಡಿಯಲ್ಲಿ ಅನುದಾನವನ್ನು ಅನುಮೋದಿಸಬೇಕಾಗಿರುತ್ತದೆ. ಕಾಮಗಾರಿಯನ್ನು ಪೂರ್ಣಗೊಳಿಸಿ ಒಂದು ವರ್ಷ ಸಮಯವಾಗಿರುವ ಹಿನ್ನಲೆಯಲ್ಲಿ ಸದರಿ ಕಾಮಗಾರಿಗಳನ್ನು ಆಯುಕ್ತರವರ ಕ್ಯಾಟಗರಿ (Commissioner Category) ಅಡಿಯಲ್ಲಿ ಹಣ ಪಾವತಿಸಲ್ಲು ಅನುಮೋದಿಸಜೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ 2018-19 ರ ಆಯವ್ಯಯದಲ್ಲಿ ಉಳಿಕೆಯಾಗಬಹುದಾದ ಅನುದಾನದಲ್ಲಿಇಂದಿರಾ ಕ್ಯಾಂಟೀನ್ ಕಟ್ಟಡದ ಸುತ್ತಮುತ್ತಲಿನ ಭದ್ರತೆ ಮತ್ತು ಇತರೆ ಸೌಲಭ್ಯ (Augmentation/Ambience Work) ಗಳ ಒದಗಿಸಲಾದ ಕಾಮಗಾರಿಗಳ ಒಟ್ಟು ವೆಚ್ಚ ರೂ.38.00 ಕೋಟಿಗಳನ್ನು "ಆಯವ್ಯಯ ಅನುದಾನ ಮರುಹೊಂದಾಣಿಕೆ (Re-appropriation of grants)" ಅಡಿಯಲ್ಲಿ ಒದಗಿಸಲು ಕೋರಿ ಮತ್ತು ಸದರಿ ಕಾಮಗಾರಿಗಳನ್ನು ಆಯುಕ್ತರವರ ಕ್ಯಾಟಗರಿ (Commissioner Category) ಅಡಿಯಲ್ಲಿ ಹಣ ಪಾವತಿಸಲು ಕೋರಿ ಪ್ರಸ್ತಾವನೆಯನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮಂಡಿಸಲಾದ ಟಪ್ಪಣಿ.

ನಿರ್ಣಯ: ಆಯುಕ್ತರವರ ದಿನಾಂಕ: 26.07.2018ರ ಟಪ್ಪಣಿಯನ್ನು ಪರಿಶೀಲಿಸಲಾಗಿ, ಸದರಿ ಕಾಮಗಾರಿಗಳು ಸರ್ಕಾರದ ಅನುದಾನದ ಅನುಮೋದನೆ ನಿರೀಕ್ಷಿಸಿ ಕೈಗೊಂಡಿದ್ದು, ಹಾಗೂ ಸರ್ಕಾರವು ಸದರಿ ವೆಚ್ಚವನ್ನು ಪಾಲಿಕೆ ನಿಧಿಯಿಂದಲೇ ಭರಿಸಲು ಸೂಚಿಸಿರುವ ಹಿನ್ನಲೆಯಲ್ಲಿ, ಪೂರ್ಣಗೊಂಡಿರುವ ಕಾಮಗಾರಿ ಬಿಲ್ಲುಗಳ ವೆಚ್ಚವನ್ನು 2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ ಪಿ3106 ರಲ್ಲಿ ಮೀಸಲಿರಿಸಿರುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಂಡು ಪಾಲಿಕೆಯ ನಿಧಿಯಿಂದಲೇ ಭರಿಸಿಕೊಂಡು ಹಾಗೂ ವಿಶೇಷ ಪ್ರಕರಣವೆಂದು ಆಯುಕ್ತರ ಕ್ಯಾಟಗರಿ ಅಡಿಯಲ್ಲಿ ಹಣ ಪಾವತಿಸಲು ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು

ಕ್ರಮ ಸಂಖ್ಯೆ	ಶ್ರೇಯುತರುಗಳ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
01	ಮಹದೇವ ಎಂ	ಅಧ್ಯಕ್ಷರು	
02	ಎಂ. ಆನಂದ್	ಸದಸ್ಯರು	
03	ಉಮಾ. ಎನ್	ಸದಸ್ಯರು	
04	ಮಂಜುಳ ವಿಜಯಕುಮಾರ್	ಸದಸ್ಯರು	
05	ಅನ್ಸರ್ ಪಾಷಾ. ಎಸ್	ಸದಸ್ಯರು	
06	ಆಂಜನಪ್ಪ. ಎಂ	ಸದಸ್ಯರು	
07	ಕೆ.ಗಣೇಶ್ ರಾವ್ ಮಾನೆ	ಸದಸ್ಯರು	
08	ದಾಸೇಗೌಡ. ಸಿ	ಸದಸ್ಯರು	
09	ಶಿವಕುಮಾರ್. ಕೆ	ಸದಸ್ಯರು	
10	ಎಂ.ವೆಂಕಟೇಶ್ (ಸಂಗಾತಿ)	ಸದಸ್ಯರು	